ವಿಷಯ:- ಚಿಕ್ಕಮಗಳೂರು ತಾಲ್ಲೂಕಿನ ಮಳಲೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯಕ್ಕೆ ಅನುದಾನ ಮಂಜೂರಾತಿ.

ಚುಕ್ಕೆ ಗುರುತಿನ ಪ್ರಶ್ನೆ : 477 (2363)

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.?

ಅ ಚಿಕ್ಕಮಗಳೂರು ತಾಲ್ಲೂಕು, ಮಳಲೂರು ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಘಟಕ ಅಥವಾ 10 ಹಾಸಿಗೆಯ ಆಸ್ಪತ್ರೆಯನ್ನು ಸ್ಥಾಪಿಸಲು ಸರ್ಕಾರವು ಗ್ರಾಂಟ್ಸ್‌ನ್ನು ಮಂಜೂರು ಮಾಡಿರುವುದೇ ?

ಆ ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗಿತ್ತು ಹಾಗೂ ಕೆಲಸ ಯಾವ ಹಂತದಲ್ಲಿದೆ.

ಇ ಇಲ್ಲದಿದ್ದಲ್ಲಿ ಪ್ರಸಕ್ತ ವಾರ್ಷಿಕ ಯೋಜನೆಯಲ್ಲಿ ಒದಗಿಸಲು ಸರ್ಕಾರ ಕ್ರಮಕೈಗೊಳ್ಳುವುದೇ ?

ಶ್ರೀ ಜಿ.ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ ಇಲ್ಲ.

ಆ ಉದ್ಭವಿಸುವುದಿಲ್ಲ.

ಇ ಇಲ್ಲ.

ಶ್ರೀ ಸಿ.ಆರ್.ಸಗೀರ್ ಅಹ್ಮದ್:- ಮಾನ್ಯ ಅಧ್ಯಕ್ಷಿಣಿಯವರೆ, ಚಿಕ್ಕಮಗಳೂರು ತಾಲ್ಲೂಕಿನ ಮಳಲೂರು ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಒಂದು 10 ಹಾಸಿಗೆಯ ಆಸ್ಪತ್ರೆಯನ್ನು ಪ್ರಾರಂಭ ಮಾಡಲು ಸರ್ಕಾರ ಅನುಮತಿಯನ್ನು ನೀಡಿದೆಯೇ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಇಲ್ಲವೆಂದು ಸರ್ಕಾರ ಉತ್ತರ ಕೊಟ್ಟಿದೆ.

ಛೇರ್ಮನ್:-ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿ. ಪ್ರಶ್ನೆ ಉತ್ತರ ಎಲ್ಲವನ್ನು ರಿಪೀಟ್ ಮಾಡಬೇಡಿ. ನಿಮಗೇನು ಬೇಕೆನ್ನುವ ಪ್ರಶ್ನೆಯನ್ನು ಕೇಳಿ?

ಶ್ರೀ ಸಿ.ಆರ್.ಸಗೀರ್ ಅಹ್ಮದ್:- ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಮಂತ್ರಿಗಳಲ್ಲಿ ನನ್ನ ಮಳಲೂರು ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿ ಆಸ್ಪತ್ರೆಯನ್ನು ತೆರೆಯುವಾಗ ಯಾರಾದರೂ ದಾನಿಗಳು ಮುಂದೆ ಬಂದಾಗ ಇದಕ್ಕೆ ಸರ್ಕಾರ ಅನುಮತಿಯನ್ನು ನೀಡುತ್ತದೆಯೇ ಎನ್ನುವುದು ನನ್ನ ಉಪ ಪ್ರಶ್ನೆ.

ಶ್ರೀ ಜಿ.ಪುಟ್ಟಸ್ವಾಮಿಗೌಡ:-ಮಾನ್ಯ ಸದಸ್ಯರಿಗೆ ಆಸ್ಪತ್ರೆಬೇಕು, ಅದಕ್ಕೆ ಈ ಪ್ರಶ್ನೆಯನ್ನು ಹಾಕಿದ್ದಾರೆಂದು ಕಾಣುತ್ತದೆ. ದಾನಿಗಳು ಮುಂದೆ ಬಂದರೆ ಆಸ್ಪತ್ರೆಯನ್ನು ಕೊಡುತ್ತೀರಾ ಎನ್ನುವ ಪ್ರಶ್ನೆ. ಆಸ್ಪತ್ರೆಯನ್ನು ಮಂಜೂರು ಮಾಡುವುದಕ್ಕೆ ತನ್ನದೇ ಆದಂತಹ ಕೆಲವು ನಿಯಮಗಳು ಇವೆ. ಪ್ರಚಾಸಂಖ್ಯೆ ಮತ್ತು ಸುತ್ತಮುತ್ತಲಿನ ಗ್ರಾಮಗಳ ದೂರ, ಅಲ್ಲಿರತಕ್ಕ ಪ್ರಕೃತಿಯ ಪರಿಸರ-ಅವುಗಳನ್ನೆಲ್ಲ ಗಮನಕ್ಕೆ ತೆಗೆದುಕೊಂಡು ನಿರ್ಧಾರ ಮಾಡಬೇಕಾಗುತ್ತದೆ. ಆ ಪ್ರದೇಶ ಮಲೆನಾಡು ಆಗಿದ್ದು, ಈ ನಿಯಮಗಳ ವ್ಯಾಪ್ತಿಗೆ ಬರುವುದಾದರೆ ಮತ್ತು ದಾನಿಗಳೂ ಮುಂದೆ ಬಂದರೆ ಆ ಊರಿಗೆ ಆಸ್ಪತ್ರೆ ಕೊಡುವುದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆನ್ನುವ ಮಾತನ್ನು ಹೇಳಬಯಸುತ್ತೇನೆ.

ವಿಷಯ:- ಮೂಡಿಗೆರೆ ತಾಲ್ಲೂಕಿನಲ್ಲಿ ಪರಿಶಿಷ್ಟ ವರ್ಗದ ಬಾಲಕರ ಹಾಸ್ಟೆಲ್.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 480 (1596)

ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ .

ಅ ಮೂಡಿಗೆರೆ ತಾಲ್ಲೂಕಿನಲ್ಲಿರುವ ಪರಿಶಿಷ್ಟ ವರ್ಗದ ಬಾಲಕರ ಹಾಸ್ಟೆಲ್ ಪ್ರಾರಂಭವಾಗಿ 6 ವರ್ಷಗಳಾದರೂ ಸರಿಯಾದ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ?

ಇ ಈ ಹಾಸ್ಟೆಲ್‌ಗೆ ಕಟ್ಟಡ ಆಗಬೇಕಾದರೆ ಬೇಕಾಗುವ ಕಾಲಾವಕಾಶವೆಷ್ಟು ?

ಶ್ರೀ ಬಿ.ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಉ ಹೌದು.

ಆ ಹಾಸ್ಟಲ್ ಕಟ್ಟಡವನ್ನು ಕಟ್ಟಲು ಕ್ರಮ ಕೈಗೊಳ್ಳಲಾಗಿದೆ.

ಇ 1992-93ನೇ ಸಾಲಿನಲ್ಲಿ ಮುಗಿಸಲು ಪ್ರಯತ್ನಿಸಲಾಗುವುದು.

ಶ್ರೀಮತಿ ಮಲ್ಲಾಜಮ್ಮ (ಶ್ರೀಮತಿ ಮೋಟಮ್ಮನವರ ಪರವಾಗಿ):-ಮಾನ್ಯ ಅಧ್ಯಕ್ಷಣಿಯವರೆ, ಮೂಡಿಗೆರೆ ತಾಲ್ಲೂಕಿನಲ್ಲಿರುವ ಪರಿಶಿಷ್ಟ ವರ್ಗದ ಬಾಲಕರ ಹಾಸ್ಟಲ್ ಪ್ರಾರಂಭವಾಗಿ ಆರು ವರ್ಷಗಳಾದರೂ ಸರಿಯಾದ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ 'ಹೌದು' ಎಂದು ಹೇಳಿದ್ದಾರೆ. ಆರು ವರ್ಷಗಳಾದರೂ ಈ ಹಾಸ್ಟೆಲ್ ಕಟ್ಟಡವನ್ನು ಏತಕ್ಕೆ ಕಟ್ಟಲಿಲ್ಲ, ಇದ್ದಂತಹ ತೊಂದರೆಯೇನು ಎಂದು ಮಾನ್ಯ ಸಚಿವರನ್ನು ಕೇಳುತ್ತೇನೆ ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಪ್ರಶ್ನೆ ಕೇಳಿದ್ದಕ್ಕೆ 'ಹಾಸ್ಟಲ್ ಕಟ್ಟಡ ಕಟ್ಟಲು ಕ್ರಮ ಕೈಗೊಳ್ಳಲಾಗಿದೆ' ಎಂದು ಉತ್ತರದಲ್ಲಿ ಹೇಳಿದ್ದಾರೆ. ಕಟ್ಟಡದ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ? ಅದಕ್ಕಾಗಿ ಎಷ್ಟು ಹಣವನ್ನು ಮಂಜೂರು ಮಾಡಿದ್ದೀರಿ ಎಂದು ನಾನು ಕೇಳುತ್ತೇನೆ.

ಶ್ರೀ ಬಿ.ಶಿವಣ್ಣ :- ಮೂಡಿಗೆರೆ ತಾಲ್ಲೂಕಿನಲ್ಲಿ ಒಟ್ಟು 5 ಹಾಸ್ಟೆಲ್‌ಗಳಿವೆ. ಸ್ವಂತ ಕಟ್ಟಡದಲ್ಲಿ ಎರಡು ಹಾಸ್ಟೆಲ್‌ಗಳಿವೆ. ಒಂದು ಮೂಡಿಗೆರೆಯಲ್ಲಿ ಪರಿಶಿಷ್ಟ ಜಾತಿ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಎರಡನೆಯದು ಪರಿಶಿಷ್ಟ ಜಾತಿ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಕಳಸ. ಇವೆರಡು ಹಾಸ್ಟೆಲ್‌ಗಳು ಸ್ವಂತ ಕಟ್ಟಡದಲ್ಲಿವೆ. ಮೂರನೆಯದಾಗಿ ಪರಿಶಿಷ್ಟ ಜಾತಿ ಸರ್ಕಾರಿ ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಮೂಡಿಗೆರೆಯಲ್ಲಿ ಸ್ವಂತ ಮೊದಲನೇ ಅಂತಸ್ತಿನ ಕಟ್ಟಡ ಕಟ್ಟಲು ಪ್ರಸ್ತಾವನೆ ಸಲ್ಲಿಸಿದೆ, ಎಸ್ಟಿಮೇಟ್ಸ್ ಬಂದಿದೆ. ಪರಿಶಿಷ್ಟ ಜಾತಿ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಬಾಡಿಗೆ ಮನೆಯಲ್ಲಿದೆ. ಆಮೇಲೆ ಪರಿಶಿಷ್ಟ ಜಾತಿ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಮೂಡಿಗೆರೆ. ಈಗ ಸದ್ಯಯದಲ್ಲಿ 14 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿದೆ.

ಛೇರ್ಮನ್:- ಅವರು ಒಂದೇ ಹಾಸ್ಟೆಲ್ ಬಗ್ಗೆ ಕೇಳಿರುವುದು. ಪರಿಶಿಷ್ಟ ಜಾತಿ ಹಾಸ್ಟೆಲ್ ಬಗ್ಗೆ ಮಾತ್ರ.

ಶ್ರೀ ಬಿ.ಶಿವಣ್ಣ:-ಅದು ಎಸ್.ಸಿ ಹಾಸ್ಟಲ್, ಎಸ್.ಟಿ.ಅಲ್ಲ.

ಶ್ರೀಮತಿ ಮಲ್ಲಾಜಮ್ಮ:-ಎಸ್.ಸಿ.ಹಾಸ್ಟಲ್ ಬಗ್ಗೆಯೇ ನಾನು ಕೇಳುತ್ತಿರುವುದು.

ಶ್ರೀ ಬಿ.ಶಿವಣ್ಣ:-ಅದು ಎಸ್.ಸಿ.ಹಾಸ್ಟಲ್. ಅದರ ಸಲುವಾಗಿ ಪ್ರಪೋಸಲ್ ಇದೆ. 14ಲಕ್ಷ ರೂಪಾಯಿಗಳ ಎಸ್ಟಿಮೇಟ್ ನಾವು ಮಾಡಿದ್ದೇವೆ. ಅದಕ್ಕೆ ನಾಳೆ ನಾಡದ್ದು ಎರಡು ದಿವಸಗಳಲ್ಲಿ ಆಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಡುತ್ತೇವೆ. ಅದೇ ಪ್ರಕಾರ ಗರ್ಲ್ಸ್ ಹಾಸ್ಟೆಲ್ ಸಲುವಾಗಿ 6 ಲಕ್ಷ 26 ಸಾವಿರ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದೇವೆ. 1992-93 ಇಸವಿ ಮುಗಿಯುವುದರಲ್ಲಿ ಈ ಎರಡು ಕಟ್ಟಡಗಳನ್ನು ಕಟ್ಟಿಸಿ ಕೊಡುತ್ತೇವೆ.

ಶ್ರೀ ಜಿ.ಪುಟ್ಟಸ್ವಾಮಿಗೌಡ:-ಪ್ರಶ್ನೆ : 375 (1865)ಕ್ಕೆ ಸಮಯ ಕೇಳಿದ್ದೇನೆ.

ಡಾ || ಎ.ಮಲಕರೆಡ್ಡಿ :-ಎರಡನೇ ಸಲ ಈ ಪ್ರಶ್ನೆ ಕೇಳಿದ್ದೇನೆ. 31 ನೇ ತಾರೀಖಿಗೆ ಸದನ ಮುಗಿಯುತ್ತದೆ.

ಶ್ರೀ ಜಿ.ಪುಟ್ಟಸ್ವಾಮಿಗೌಡ:-ಮಾನ್ಯ ಸದಸ್ಯರು ಬಹಳ ಜಟಿಲವಾದಂಥ ಮಾಹಿತಿಯನ್ನು ಕೇಳಿದ್ದಾರೆ. ನಮ್ಮ ಪ್ರಯತ್ನ ನಾವು ಮಾಡುತ್ತಿದ್ದೇವೆ. ಎಂಟು ವಿಶ್ವವಿದ್ಯಾನಿಲಯಗಳಿಗೆ ಬರೆದಿದ್ದೇವೆ, ಡಿ.ಎಚ್.ಒ.ಗಳಿಗೆ